## ಹಾಸನ ಜಿಲ್ಲಾ ದಂಡಾಧಿಕಾರಿಗಳ ನಡವಳಿಕೆಗಳು, ಹಾಸನ ಜಿಲ್ಲೆ, ಹಾಸನ .

ವಿಷಯ:- ಹಾಸನ ಜಿಲ್ಲೆಯಾದ್ಯಂತ ದ ಂಡ ಪ್ರಕ್ರಿಯ ಸಂಹಿತೆ ಕಲಂ 144ರನ್ವಯ ನಿಷೇಧಾಜ್ಞೆಯನ್ನು ಮುಂದುವರಿಸುವ ಕುರಿತು.

ಓದಲಾಗಿದೆ:- ಈ ಕಛೇರಿ ಸಮಸಂಖ್ಯೆ ಆದೇಶ ದಿನಾಂಕ11/05/2004.

ಪ್ರಸ್ತಾವನೆ:-

ದಿನಾಂಕ:13/05/2004ರಂದು ಹಾಸನ ಜಿಲ್ಲೆಯ ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಯ ಮತಗಳ ಎಣಿಕೆಯು ನಡೆದಿದ್ದು, ಆರಕ್ಷಕ ಅಧೀಕ್ಷಕರು, ಹಾಸನರವರ ವರದಿಯನ್ವಯ ದಿನಾಂಕ:13/05/2004ರ ಬೆಳಿಗ್ಗೆ 6.00 ಘಂಟೆಯಿಂದ ದಿನಾಂಕ:14/05/2004ರ ಬೆಳಿಗ್ಗೆ 6.00 ಘಂಟೆಯವರೆಗೆ ಭಾರತ ದಂಡ ಪ್ರಕ್ರಿಯ ಸಂಹಿತೆ ಕಲಂ 144ರನ್ವಯ ಜಿಲ್ಲೆಯಾದ್ಯಂತ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಗಿದೆ.( ಎಣಿಕೆ ಕೇಂದ್ರಗಳನ್ನು ಹೊರತುಪಡಿಸಿ) ಮತಗಳ ಎಣಿಕೆ ಕಾರ್ಯವು ಪೂರ್ಣಗೊಂಡಿದ್ದು, ಫಲಿತಾಂಶ ಹೊರಬಿದ್ದ ನಂತರ ಅಹಿತಕರ ಘಟನೆಗಳು ಜರುಗಬಹುದೆಂದು ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನರವರು ಅಭಿಪ್ರಾಯಿಸಿದನ್ವಯ , ಪುನ: 1 ದಿನ ನಿಷೇದಾಜ್ಞೆಯನ್ನು ವಿಸ್ತರಿಸುವುದು ಅತ್ಯಾವಶ್ಯವೆಂದು ನಾನು ಅಭಿಪ್ರಾಯ ಪಟ್ಟು ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**ಆದೇಶ ಸಂಖ್ಯೆ:ನ್ಯಾಯಾಂಗ54/2004-2005, ದಿನಾಂಕ:13/05/2004.**

ಎಂ. ಮಹೇಶ್ವರ ರಾವ್ , ಭಾ.ಆ.ಸೇ., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ ಆದ ನಾನು ಭಾರತೀಯ ದಂಡ ಪ್ರಕ್ರಿಯ ಸಂಹಿತೆ 1973 ಕಲಂ 144ರಡಿ ನನಗೆ ದತ್ತವಾಗಿರುವ ಅಧಿಕಾರಿವನ್ನು ಚಲಾಯಿಸಿ ದಿನಾಂಕ:14/05/2004ರಂದು ಬೆಳಿಗ್ಗೆ 6.00 ಘಂಟೆಯಿಂದ ದಿನಾಂಕ:15/05/2004ರ ಬೆಳಿಗ್ಗೆ 6.00 ಘಂಟೆಯವರೆಗೆ ಹಾಸನ ಜಿಲ್ಲೆಯಾದ್ಯಂತ ಎಲ್ಲಾ ಸಾರ್ವಜನಿಕ ಪ್ರದೇಶವನ್ನು ನಿಷೇಧಿಸಿ , ಸಾರ್ವಜನಿಕರು , ವಿವಿಧ ರಾಜಕೀಯ ಪಕ್ಷದವರು , ಸಂಘ-ಸಂಸ್ಥೆಯವರು 5 ಜನಕ್ಕಿಂತ ಮೇಲ್ಪಟ್ಟು ಗುಂಪು ಸೇರುವುದು , ಯಾವುದೇ ತರಹದ ಆಯುಧ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದು, ಮೆರವಣಿಗೆ ನಡೆಸುವುದು, ಘೋಷಣೆ ಕೂಗುವುದು ಹಾಗೂ ಶಾಂತಿ ಮತ್ತು ಶಿಸ್ತು ಪಾಲನೆಗೆ ಭಂಗ ತರುವ ರೀತಿಯಲ್ಲಿ ವರ್ತಿಸುವುದನ್ನು ಈ ಮೂಲಕ ನಿಷೇಧಿಸಿರುತ್ತೇನೆ.

ಈ ಆದೇಶವು ದಿನಾಂಕ:14/05/2004ರ ಬೆಳಿಗ್ಗೆ 6.00 ಘಂಟೆಯಿಂದ 15/05/2004ರ ಬೆಳಿಗ್ಗೆ 6.00 ಘಂಟೆಯವರೆಗೆ ಜಾರಿಯಲ್ಲಿರುತ್ತದೆ.

ಜಿಲ್ಲಾ ದಂಡಾಧಿಕಾರಿ,
ಹಾಸನ ಜಿಲ್ಲೆ, ಹಾಸನ

ಪ್ರತಿಗಳು:-

1. ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನರವರಿಗೆ ಸೂಕ್ತ ಕ್ರಮಕ್ಕಾಗಿ
2. ಅಪರ ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ಹಾಗೂ ಉಪ ಅಧೀಕ್ಷಕರು, ಹಾಸನ/ಹೊಳೇನರಸೀಪುರ, ಹಾಗೂ ಅರಸೀಕೆರೆರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಉಪವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ
4. ಚುನಾವಣಾಧಿಕಾರಿಗಳು.ಸಕಲೇಶಪುರ/ಅರಕಲಗೂಡು/ಬೇಲೂರು/ಅರಸೀಕೆರೆ/ಗಂಡಸಿ/ಹಾಸನ/ ಹೊಳೇನ ರಸೀಪುರ ಹಾಗೂ ಶ್ರವಣ ಬೆಳಗೊಳ ವಿಧಾನಸಭಾ ಕ್ಷೇತ್ರರವರಿಗೆ ಮಾಹಿತಿಗಾಗಿ
5. ಜಿಲ್ಲೆಯ ಎಲ್ಲಾ ತಹಸೀಲ್ದಾರ್ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ಸಹಾಯಕ ನಿರ್ದೇಶಕರು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ, ಹಾಸನ ಜಿಲ್ಲೆ, ಹಾಸನರವರಿಗೆ ಕಳುಹಿಸುತ್ತಾ , ರಾಜ್ಯ ಹಾಗೂ ಜಿಲ್ಲೆಯ ಎಲ್ಲಾ ದಿನಪತ್ರಿಕೆಗಳಲ್ಲಿ ಮುಫತ್ತಾಗಿ ಪ್ರಕಟಿಸಲು ಕ್ರಮ ಕೈಗೊಳ್ಳುವ ಕುರಿತು ಕಳುಹಿಸಿದೆ.